# ಕಾನನ

## ನಿಸರ್ಗದೆಡೆಗೆ ಪಯಣ

**AUGUST 2013**



BANNERUGHATTA

**WILDLIFE CONSERVATION GROUP**



# ಕಾನನ

AUGUST 2013

ನಿಸರ್ಗದೆಡೆಗೆ ಪಯಣ

* ಗೋಸುಂಬೆ
* ಹಕ್ಕಿಲೋಕ
* ವಿ ವಿ ಅಂಕಣ
* ಚಿಟ್ಟೆ (ಕವನ)


ಸಂಪಾದಕರು : ಅಶ್ವಥ ಕೆ.ಎನ್ ವಿನ್ಯಾಸ : ನಾಗೇಶ್ ಓ.ಎಸ್

ಲೇಖನ ವೃಂದ : ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ಅಶ್ವಥ ಕೆ.ಎನ್, ಶಂಕರಪ್ಪ ಕೆ.ಪಿ, ಧನರಾಜ್ ಎಂ.

ಕರಡು ತಿದ್ದುಪಡಿ : ಮುರಳಿ ಎಸ್.

E-mail : kaanana.mag@gmail.com



# ಸಂಪಾದಕೀಯ


ಕಾಡಿನಲ್ಲಿರುವ ಆನೆಗಳಿಗೆ ಉಂಟಾಗುತ್ತಿರುವ ಶೋಷಣೆ, ನಮ್ಮ ಕಣ್ಣಿಗೆ  ಕಾಣುತ್ತಿಲ್ಲ. ದಸರ ನಮ್ಮ ನಾಡ ಹಬ್ಬ. ಇದಕ್ಕೆ ತನ್ನದೆ ಆದ ಸಾಂಸ್ಕೃತಿಕ ನೆಲೆ ಇದೆ. ದಸರ ಆನೆ ಹಾಗು ಆನೆ-ಮಾನವ ಸಂಘರ್ಷವು ಈ ಅಧುನಿಕ ಯುಗದ ಮಾನವನ ಬಗೆಹರಿಸಲಾಗದ ತುಂಬಾ  ಸಂಕೀರ್ಣ ಸಮಸ್ಯೆಯಾಗಿದೆ.

ವಿಪರೀತವಾಗಿರುವ ನಮ್ಮ ಜನಸಂಖ್ಯೆಯ ಹಲವು ಬೇಡಿಕೆಗಳಿಗಾಗಿ ನಾವು ಕಾಡನ್ನೇ ನಂಬಿದ್ದೇವೆ. ಮಾನವನ ಊಟಕ್ಕೆ ಕಾಡು ಕಡಿದು ಹೊಲಗದ್ದೆಗಳಾಗಿಸಿದ್ದೇವೆ. ಕಾಫಿತೋಟಗಳನ್ನಾಗಿಸಿದ್ದೇವೆ. ವಿದ್ಯುತ್ತಾಗಿ ಮತ್ತು ನೀರಿಗಾಗಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಿದ್ದೇವೆ. ಸಂಚಾರಕ್ಕೆ ರಸ್ತೆಗಳನ್ನು ನಿರ್ಮಿಸಿದ್ದೇವೆ. ಇವೆಲ್ಲವುಗಳ ನೇರ ಪರಿಣಾಮವಾಗಿ ಆನೆಗಳ ಸಾಮ್ರಾಜ್ಯ ಚಿಕ್ಕದಾಗುತ್ತಾ ಬಂದಿದೆ. ಆನೆ-ಮಾನವನ ಸಂಘರ್ಷ ಏಕೆ ಉಂಟಾಯಿತೆಂದರೆ. ಆನೆ-ಮಾನವರ ಸಹಬಾಳ್ವೆಗೆ ಮಾನವನೇ ಕಲ್ಲಾಕ್ಕಿದ್ದರಿಂದ. ನಾಡಿಗೆ, ಹೊಲ-ತೋಟಕ್ಕೆ ಬಂದ ಆನೆಗಳನ್ನು ಪಟಾಕಿಯಿಟ್ಟು, ಕೆಲವು ಬಾರಿ ಗುಂಡಿಟ್ಟು ಓಡಿಸುತ್ತೇವೆ. ಅವುಗಳ ಆವಾಸಗಳನ್ನು ಆವರಿಸಿಕೊಂಡು ನಾವು ರೆಸರ್ಟ್, ಗಣಿಗಾರಿಕೆ ಮಾಡುತ್ತೇವೆ.

ಕರಂಟು ಬಿಟ್ಟು ಕೊಲ್ಲುತ್ತೆದ್ದೇವೆ, ಕಾಡು ಕಾಡಿಗೆ ಬೆಂಕಿಯಿಟ್ಟು ಆನೆಗಳಿಗೆ ಒಂದೇ ಒಂದು ಹುಲ್ಲುಕಡ್ಡಿ ಸಿಗದ ಹಾಗೆ ಮಾಡಿದ್ದೇವೆ.  ಇಪ್ಪತ್ತಾರು ಸಾವಿರ ಇರುವ ಆನೆಗಳು ನೂರ ಇಪ್ಪತ್ತು ಕೋಟಿ ಇರುವ ನಾವು ಎಂತಹ ಹೋರಾಟ!. ಮತ್ತೆ ಗಣೇಶ ಉತ್ಸವಗಳಲ್ಲಿ ಆನೆ ಮುಖವನ್ನು ಬಹಳ ಭಕ್ತಿ ಗೌರವದಿಂದ ಪೂಜಿಸುತ್ತೇವೆ.


ಕಾಡಿನಲ್ಲಿ ಮೇವು ನೀರಿಲ್ಲದೆ ಹಸಿವೆ ನೀರಡಿಕೆಯಿಂದ ಬಳಲುವ ಆನೆಯ ಗೋಳು, ನಗರಕ್ಕೆ ಬಂದು ದಾರಿತಪ್ಪಿದ ಆನೆ ಹಿಂಡನ್ನು ಮೂರು ದಿನ ಊಟವಿಲ್ಲದಂತೆ ಮಾಡಿ, ನಿಂತಲ್ಲಿ ನಿಲ್ಲದೆ ಕಾಡಿಗಟ್ಟಿದಾಗ ಗುಂಪಿನಲ್ಲಿದ್ದ ಆ ಮರಿಯಾನೆ ಅನುಭವಿಸಿದ ಸಂಕಟ, ಮೇವಿಗಾಗಿ, ನೀರಿಗಾಗಿ, ಉಳಿವಿಗಾಗಿ ಅಲೆಯುತ್ತಿರುವ ಇಪ್ಪತ್ತಾರು ಸಾವಿರ ಕಾಡಾನೆಗಳ ಹಕ್ಕು ಮತ್ತು ಸಂಕಟಕ್ಕಿಂತ, ದಸರ ಹೊರುವ ಒಂದು ಆನೆಯ ನೋವು, ನಮಗೆ ಬೃಹತ್ ಆಗಿ ಕಾಣಿಸುತ್ತಿದೆ. ಆನೆ ಸಂರಕ್ಷಣೆಯ ದಿಟ್ಟಿನಲ್ಲಿ  ನಮ್ಮ ಜನರ ಮನುಸ್ಸು ಮುಖ್ಯ ವಿಷಯವನ್ನು ಬಿಟ್ಟು,ಬೇರೆದಾರಿಗೆ ಸಾಗಿದೆ.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು  ತಾವೂ ಕಾನನಕ್ಕೆ ಬರೆಯಬಹುದು.**




ವಿಳಾಸ :   kaanana.mag@gmail.com

**Wildlife Conservation Group**



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು

### * ಗೋಸುಂಬೆ

ಗೋಸುಂಬೆ ಎಲ್ಲರಿಗೂ ತಿಳಿದಿರುವಂತೆ ಬಣ್ಣ ಬದಲಾಯಿಸುವ ಜೀವಿ, ಕ್ಷಣ ಕ್ಷಣಕ್ಕೆ ಬಣ್ಣ ಬದಲಾಯಿಸುತ್ತಿರುತ್ತದೆ. ಇದರ ಉದಾಹರಣೆಯಿಂದ ಶ್ರೀರಾಮಕೃಷ್ಣರು ಎಷ್ಟು ಕಷ್ಟಕರವಾದ, ಕಠಿಣವಾದ ಆಧ್ಯಾತ್ಮಿಕ ಸತ್ಯವನ್ನು ಎಷ್ಟು ಸರಳವಾಗಿ ತಿಳಿಸಿದ್ದಾರೆ ನೋಡಿ.

ಒಮ್ಮೆ ನಾಲ್ಕು ಜನ ಕೆಲಸಮಾಡುತ್ತಿದ್ದರು. ಅವರಲ್ಲಿ ಒಬ್ಬ ಹೇಳಿದ ನೋಡಿ! ನಾನು ನಿನ್ನೆ ಇಂತಹ ಮರದ ಬಳಿ ಹೋಗಿದ್ದೆ, ಅಲ್ಲಿ ಒಂದು ಕೆಂಪು ಬಣ್ಣದ ಪ್ರಾಣಿಯನ್ನು ನೋಡಿದೆ, ಅದು ಬಹಳ ಚೆನ್ನಾಗಿತ್ತು ಎಂದ. ಅದಕ್ಕೆ ಇನ್ನೊಬ್ಬ ಸ್ನೇಹಿತ ಆಹಾ. . .! ಎಷ್ಟು ಸತ್ಯ ಹೇಳ್ತಿಯೋ ? ಆ. . . ನಾನು ಅದೇ ಮರದಲ್ಲಿ ಅದೇ ಪ್ರಾಣಿನ ನೋಡಿದ್ದೀನಿ, ಅದು ಕೆಂಪಲ್ಲ ಹಳದಿ ಬಣ್ಣ! ನನ್ನ ಮಾತೇನಾದ್ರು ಸುಳ್ಳಾದ್ರೆ ನಾನು ನನ್ನ ಮೀಸೆ ಕತ್ತರಿಸ್ಕೋತಿನಿ! ಅಂದ. ಅದಕ್ಕೆ ಮೂರನೆಯವನು ಓಹೊ. . . ಹೋ. . . ಇವರೆಲ್ಲ ಸತ್ಯ ಹರಿಶ್ಚಂದ್ರನ ಮಕ್ಕಳೂ ನಾನು ಕಣ್ಣಾರೆ ಖುದ್ದಾಗಿ ನೋಡಿದ್ದೆನೆ ಅದು ಕೆಂಪು ಅಲ್ಲ ಹಳದಿನೂ ಅಲ್ಲ, ಅದರ ಬಣ್ಣ ಕಂದು ಬಣ್ಣದ್ದು!. ನಾಲ್ಕನೆಯವನೂ ಸಹ ಇನ್ನೊಂದು ಬಣ್ಣ ಎಂದು ಹೇಳಿದ ಆಗ, ಅವರಲ್ಲಿ ದೊಡ್ಡ ಜಗಳವೇ ಆಯಿತು. ಆಗ ಅವರೆಲ್ಲಾ ಸೇರಿ ಅದೇ ಮರದ ಕೆಳಗೆ ಕುಳಿತಿದ್ದ ಸಂನ್ಯಾಸಿಯ ಬಳಿ ತೀರ್ಮಾನಕ್ಕೆಂದು ಬಂದರು. ಎಲ್ಲರೂ ಒಬ್ಬೊಬ್ಬರಂತೆ ತಮ್ಮ ತಮ್ಮ ವಾದಗಳನ್ನ ಮಂಡಿಸಿದರು.

ಆಗ ಸಂನ್ಯಾಸಿಯು ನೀವು ಹೇಳಿದ್ದೆಲ್ಲವೂ ಸತ್ಯ, ಎಂದಾಗ ಎಲ್ಲರಿಗೂ ಆಶ್ಚರ್ಯ!, ನಾವು ಎಲ್ಲರೂ ನೋಡಿದ್ದು ಒಂದೇ ಪ್ರಾಣಿ ಅದು ಹೇಗೆ ಬೇರೆ ಬೇರೆ ಬಣ್ಣದಲ್ಲಿರಲು ಸಾಧ್ಯ!, ಎಂದರು. ಅದಕ್ಕೆ ಸಂನ್ಯಾಸಿಯು ಹೇಳುತ್ತಾರೆ, ನೋಡಿ ಆ ಪ್ರಾಣಿಯ ಹೆಸರು ಗೋಸುಂಬೆ ಅಂತಾ, ಅದು ಬಣ್ಣ ಬದಲಾಯಿಸುವ ಪ್ರಾಣಿ, ನೀವೆಲ್ಲರೂ ಸಹ ಅದು ಒಂದೊಂದು ಬಣ್ಣವಿದ್ದಾಗ ಮಾತ್ರ ನೋಡಿದ್ದೀರಿ ಅದಕ್ಕೆ ಜಗಳ, ನಾನಾದರೋ ಇಲ್ಲಿಯೇ ಇರುತ್ತೇನೆ, ನೀವು ಹೇಳಿದ ಬಣ್ಣಗಳಲ್ಲದೇ ಬೇರೆ ಬಣ್ಣವನ್ನೂ ಸಹ ಅದು ತಾಳುವುದುಂಟು ಎಂದಾಗ ಎಲ್ಲರೂ ಸಮಾಧಾನವಾಗುತ್ತಾರೆ.

ಇದಕ್ಕೆ ಶ್ರೀರಾಮಕೃಷ್ಣರು ಹೇಳುತ್ತಾರೆ, ಇದೇ ರೀತಿ ಪ್ರತಿಯೊಂದು ಧರ್ಮದವರೂ ಸಹ ಭಗವಂತನನ್ನು ಒಂದೊಂದು ರೀತಿಯಲ್ಲಿ ನೋಡಿ ನನ್ನ ಧರ್ಮ ಸರಿ, ಇತರರ ಧರ್ಮ ತಪ್ಪು ಎಂದು ಭಾವಿಸುತ್ತಾರೆ. ಆದರೆ ಯಾರು ಭಗವಂತನನ್ನು ಎಲ್ಲಾ ಭಾವನೆಗಳಲ್ಲಿ ಕಂಡಿದ್ದಾನೆಯೋ ಅವನು ಭಗವಂತ ಎಲ್ಲಾ ರೂಪಗಳು ತಾಳಬಲ್ಲ ಎಂದು ತಿಳಿದು ಯಾರೊಡನೆಯೂ ಜಗಳವಾಡುವುದಿಲ್ಲ.

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್



# ಹಕ್ಕಿ ಲೋಕ


## * ಬೂದುಬೆಳವ ಮತ್ತು ಕಾಲುಬೈರ

**ವೈಜ್ಞಾನಿಕ ಹೆಸರು**: *Streptopelia decaocto*

**ಇಂಗ್ಲೀಷ್ ಹೆಸರು**: Eurasian Collared-Dove

ನಡು ಮಧ್ಯಾನ, ಆಕಾಶವೆಲ್ಲ ಕಪ್ಪು ಮೋಡಗಳಿಂದ ಆವರಿಸುತ್ತಿತ್ತು. ಜೋರು ಮಳೆ ಬರುವ ಸಂಭವ ಎದ್ದು ಕಾಣುತ್ತಿತ್ತು. ಮೈ ಮೇಲಿದ್ದ ಕೂದಲುಗಳೆಲ್ಲ ನಿಮಿರಿನಿಂತು, ಕೈ-ಕಾಲುಗಳ ಮೇಲೆಲ್ಲಾಸಣ್ಣ ಸಣ್ಣ ಗುಳ್ಳೆಗಳಾಗಿ, ಚಳಿ-ಗಾಳಿಗೆ ಕಿವಿಯೆಲ್ಲ ಗುಫ್ ಎಂದು ಮುಚ್ಚುವಂತೆ ತಣ್ಣಗಾಗಿ, ಗುಬ್ಬಚ್ಚಿಯಂತೆ ಒಂಟಿಮಾವಿನ ಮರದ ಬುಡದಲ್ಲಿ ಕುಳಿತ್ತಿದ್ದ ಕಾಲುಬೈರ.

ಕಾಲುಬೈರ ಹಳೆಕಾಲದ ಮನುಷ್ಯ!, ಆ ಚಂದ್ರಲೋಕಕ್ಕೆ ಹಾರಿ! ಅಲ್ಲಿ ಮನೆ ಮಾಡುವ ಈ ಹೊಸ ಜಗತ್ತಿನ ಬಗ್ಗೆ ಅರಿವಿಲ್ಲದೆ ತನ್ನದೆ ಆದ ಲೋಕದಲ್ಲಿ ಬದುಕುತ್ತಿದ್ದ. ಕೆಲವು ವೇಳೆ ಆಧುನಿಕತೆಗೆ ಸಾವಾಲಾಕುತ್ತಿದ್ದ. ಇವನನ್ನು ಕಾಲುಬೈರನೆಂದು ಕರೆಯುತ್ತಿದ್ದರು, ಉತ್ತುತ್ತಿ, ಕೊಕ್ಕರೆಳಂತೆ ಕಾಲುಗಳು ಸಣ್ಣಗೆ ಉದ್ದಾವಾಗಿ ಏಳು ಅಡಿ, ನಿಗ್ರೋ ಜನಾಂಗದಂತೆ ಎತ್ತರಕ್ಕೆ ಬೆಳೆದುನಿಂತ್ತಿದ್ದ. ಅದ್ದರಿಂದಲೇ ಬೈರಪ್ಪ ಎಂಬ ಹೆಸರು ಜನರ ಬಾಯಲ್ಲಿ ಕಾಲುಬೈರ ಎಂದು ಹೆಸರುವಾಸಿಯಾಗಿತ್ತು.





ಕಾಲುಬೈರನ ಸುತ್ತಲೂ ಅಲ್ಲಲ್ಲಿ ಹಸುಗಳು ಮೇಯುತ್ತಿದ್ದವು, ಅವುಗಳಲ್ಲಿ ಒಂದು ಕಳ್ಳಸ ದೂರದಲ್ಲಿ ಎತ್ತಲೋ ಹೋಗುತ್ತಿತ್ತು. ಒಂಟಿಮಾವಿನ ಮರದಿಂದ "ಏ. . .ಏ. . .ರಾ ರಾಂಡ ಇಟ್ಲಾ" ಎಂಬ ಶಬ್ಧಬಂತು. ದಾರಿಯಲ್ಲಿ ನಡೆದು ಹೋಗುತ್ತಿದ್ದವನು ತಲೆಯೆತ್ತಿ ನೋಡಿದೆ, ಕಾಲುಬೈರ ಆ ಚಳಿಗೆ ಮಾವಿನ ಮರದ ಬುಡದಲ್ಲಿ ತನ್ನ ಎರಡು ಕೈಗಳಿಂದ ಕಾಲುಗಳನ್ನು ಬಿಗಿಯಾಗಿ ಹಿಡಿದು ಮೊಣಕಾಲಿನ ಮೇಲೆ ತನ್ನ ಗಡ್ಡವನ್ನು ಇರಿಸಿ ಗುಬ್ಬಚ್ಚಿಯಂತೆ ಗೂಡಿಸಿಕೊಂಡು ಕುಳಿತ್ತಿದ್ದು ಕಂಡಿತು. ದೂರದಲ್ಲಿ ಹೋಗುತ್ತಿದ್ದ ಹಸುವನ್ನು ಕಂಡು ಏನನ್ನೋ ಗದರಿಸುತ್ತಾ. . . ಕುಳಿತ್ತಿದ್ದ.

ನನ್ನ ಮುಖದ ಮೇಲೆ ಮಳೆಯ ಹನಿಗಳು ಟಪ್. . .ಟಪ್. . .ಟಪ್. . .ಎಂದು ಬೀಳತೊಡಗಿದವು, ಜೋರು ಮಳೆಬರುವ ಸಂಭವವಿದ್ದುದರಿಂದ ಸರಸರನೆ ಹೆಜ್ಜೆಯಾಕುತ್ತಾ ಮನೆಯತ್ತ ನಡದೆ. ಹನಿ ಶುರುವಾಗಿದ್ದೇ ತಡ ಕಾಲುಬೈರನು ತನ್ನ ಮುಡ್ಡಿಯ ಕೆಳಗೆ ಹಾಕಿಕುಳಿತ್ತಿದ್ದ ಗೋಣಿಚೀಲವನ್ನು ಗೊಂಗಡಿ ಮಾಡಿಕೊಂಡು ತಲೆಯ ಮೇಲೆಹಾಕಿಕೊಂಡು ಹಸುಗಳತ್ತ ಬೇಗಬೇಗ

ಸಾಗುತ್ತಿದ್ದ. ಮಳೆಯ ಬರ್ರೋ ಎಂಬ ಶಬ್ಧಜೋರಾಗಿ ಕಾಲುಬೈರ ಕಾರ್ಮೋಡಗಳ ಮಳೆಯಲ್ಲಿ ಲೀನವಾಗಿ ಹೋದ. ನಾನು ಮನೆ ಮುಟ್ಟುವುದರಲ್ಲಿ ನೆನೆದು ಮುದ್ದೆಯಾಗಿ ಹೋದೆ. ಒದ್ದೆಯಾದ ಬಟ್ಟೆಗಳನ್ನು ಕಳಚಿ, ಒಣ ಬಟ್ಟೆಯಿಂದ ಕೈ-ಕಾಲು, ತಲೆಯನ್ನು ಒರಸಿ, ಬಟ್ಟೆಗಳನ್ನು ಬದಲಿಸಿ, ಊಟ ಮುಗಿಸಿದೆ. ಹೊರಗೆ ಮಳೆಯ ಸದ್ದು ತುಸು ಕಡಿಮೆಯಾದರು ಮಳೆ ಬಿಟ್ಟಿರಲ್ಲಿಲ್ಲ, ನಾನು ಶಾಲೆಗೆ ಮತ್ತೆ ಹೊರಡಬೇಕಿತ್ತು, ಸ್ವಲ್ಪ ಸಮಯದ ನಂತರ ಮಳೆ ನಿಲ್ಲುವುದನ್ನೇ ಕಾದು ನಿಂತಿದ್ದೆ. ಸ್ವಲ್ಪ ಸಮಯದ ನಂತರ ಮಳೆನಿಂತಿತು. ಆಗಸದಲ್ಲಿ ಕಪ್ಪುಮೊಡಗಳು ಹಾರಾಡುತ್ತಿದ್ದವು, ಶಾಲೆಯತ್ತ ಸರಸರನೇ ಹೆಜ್ಜೆಯಾಕುತ್ತಿದೆ.

ದೂರದಲ್ಲಿ, 'ಹರಿಕೊಡೆಯ' ಹುಲ್ಲುಗಾವಲಿನ ಮಧ್ಯದಲ್ಲಿ ಯಾವುದೋ ರಾಕೇಟ್ಟನ್ನು ಉಡಾವಣೆ ಮಾಡಿ ಬಿಟ್ಟಂತೆ ಬಿಳಿಯ ಹೊಗೆಯ ಬಾಲ ಆಕಾಶಕ್ಕೆ ಏರಿ ಆ ಕರಿ ಮೊಡಗಳಲ್ಲಿ ಸೇರಿ ನಿಧಾನವಾಗಿ ಲೀನವಾಗುತ್ತಾ ಮೋಡದ ಗಾತ್ರವನ್ನು ಜಾಸ್ತಿಮಾಡುತ್ತಿತ್ತು. ಏನೋ. . .! ಹೀಗೆ ಹೊಗೆ!, ಯಾರೋ ಚಳಿಕಾಯಿಸಲು ಬೆಂಕಿಯಾಕಿರಬೇಕು ಎಂದುಕೊಂಡೆ, ಹತ್ತಿರ ಹತ್ತಿರವಾಗುತ್ತಿದ್ದಂತೆ ಆಳೆತ್ತರಕ್ಕೆ ಬೆಳೆದು ನಿಂತಿದ ಹುಲ್ಲಿನ ನಡುವೆ ಕಾಲುಬೈರ ಚಳಿಗೆ ಬೆಂಕಿಕಾಯಿಸುತ್ತಿರಲ್ಲಿಲ್ಲ!, ಬದಲಿಗೆ ಒಂದು ಕಡ್ಡಿಗೆ ಯಾವುದೋ ಹಕ್ಕಿಯನ್ನು ಒಂದು ಹಸಿಕಡ್ಡಿಗೆ ಚುಚ್ಚಿ ಬೆಂಕಿಯಲ್ಲಿ ಸುಡುತ್ತಿದ್ದ. ಎಂತಹ ಪಕ್ಷಿವಿಜ್ಞಾನಿಯೂ ಕೂಡ ಇಂತಹ ಹಕ್ಕಿ ಎಂದು ಕಂಡು ಹಿಡಿಯಾಲಾಗದಂತೆ ಕರ್ರಗೆ ಸೀದು ಕರ್ರಕಲಾಗಿತ್ತು. “ಏನ್. . .! ಏನೋ. . .ಮಾಡ್ತ ಇದ್ದಿರಾ?” ಎಂದೆ. “ಏ. . .ಅದೆ! ಬೆಳವಾಯಿ. . .ಕೊಟ್ಟೆಂಟ್ನಿ. . .! ಅದಿ”, ಎಂದ ತೆಲುಗಿನಲ್ಲಿ. “ತಾತ! ಯಾವ್ ಹಕ್ಕಿ ಇದು” ಎಂದು ಮತ್ತೆ ಕೇಳಿದೆ. “ಅದೆ ಆ ಕಾಂಪೌಂಡ್ ಕುಚಾಲು ಪೈನ ಕುಕೊಂಟ್ಟುಂದಿ ಕದ! ಅದಿ”. ಎಂದ. ತಲೆಯನ್ನು ಮೇಲೆತ್ತಿ ನೋಡಿ “ಹೋ. . .ನೀವು ಅರ್ಜುನಪ್ಪಾ ಮೊಮ್ಮಗಡು ಕದ?” ಎಂದ. “ಹ್ಞೋ. . .”ಎಂದೆ. “ಅದೆ ಬೆಳವಾಯಿ ಗೊತ್ತಿಲ್ಲ ನಿಂಕ, ಈ ರಾಗಿ ಕಾಳು ಎಲ್ಲಾ ತಿಂತದೆ. ಗೊರವಂಕಿ (ಮೈನಾ) ಗಾತ್ರ ಇರ್ತದೆ” ಎಂದು ತನ್ನ ಕೈಯಿಂದ ಗಾತ್ರವನ್ನು ತೋರಿಸುತ್ತಾ. . .ಬೂದು ಬಣ್ಣದ ಹಕ್ಕಿ (ಬೂದು ಮಿಶ್ರಿತ ಕಂದುಹಕ್ಕಿ), ಈ ಕತ್ತು ಹಿಂದೆ ಕಪ್ಪುಗೆರೆ ಒಂದು ಇರ್ತದೆ (ಕತ್ತಿನ ಹಿಂಭಾಗದಲ್ಲಿ ಕಪ್ಪುಪಟ್ಟಿ ಹೊಟ್ಟೆಯ ತಳಭಾಗದಲ್ಲಿ ತಿಳಿಕಂದು, ಕಣ್ಣು, ಕೊಕ್ಕು ಕಪ್ಪಾಗಿರುತ್ತದೆ) ಎಂದ. “ಇದಿ ನಂಜರ ಬಲು ಬಾಗುಂಟ್ಟುಂದಿ!” ಎಂದು ತನ್ನ ಕೈಯಲ್ಲಿದ್ದ ಉಪ್ಪು-ಕಾರವನ್ನು ಸುಟ್ಟ ಹಕ್ಕಿಗೆ ಉಜ್ಜುತ್ತಿದ್ದ, ನನಗೆ ಶಾಲೆಗೆ ಟೈಮ್ ಆಗಿ, ನಾನು ಹೊರಟು ಹೋದೆ. ಈ ಕಾಲುಬೈರನದ್ದು ಹಸುಗಳನ್ನು ಮೇಯುಸುತ್ತಾ ದಿನಾಲು ಇದೆ ಕೆಲಸ ಆಗಿರುತ್ತಿತ್ತು.




ಈಗ ಹತ್ತು-ಹನ್ನೆರಡು ವರ್ಷಗಳ ಹಿಂದೆ ಕಾಲುಬೈರಪ್ಪ ತೀರಿಹೋದ!, ನಾನು ಈಗಲು ನೆನಪು ಮಾಡಿಕೊಳ್ಳುತ್ತೇನೆ ಕಾಲುಬೈರ, ಆ ಮುದುಕ ಅದೆಷ್ಟು ಹಕ್ಕಿಗಳನ್ನು ಹೊಡೆದು ತಿಂದಿರಬಹುದು ಎಂದು ಯೋಚಿಸಿದ್ದೇನೆ.

ನನ್ನ ಹತ್ತು-ಹದಿನೈದು ವರ್ಷಗಳ ಪಕ್ಷಿ ವೀಕ್ಷಣೆಯಲ್ಲಿ ಈ ಕತ್ತಿನ ಹಿಂದೆ ಕಪ್ಪು ಪಟ್ಟಿ ಇರುವ ಬೆಳವವನ್ನು ನೋಡಿರುವುದು ತುಂಬ ವಿರಳ!, ಒಂದೆರಡು ಸಾರಿ ಬನ್ನೇರುಘಟ್ಟ ಕಾಡಿನಲ್ಲಿ, ಒಂದೆರಡು ಬಾರಿ ಬಂಡೀಪುರದಲ್ಲಿ ನೋಡಿದ್ದೇನೆ. ಒಂದು ಸಾರಿ ನನ್ನ ಕ್ಯಾಮರ ಕಣ್ಣಿಗೂ ಸಿಕ್ಕಿದೆ. ಏನೇ ಆಗಲಿ ಈ ಹಕ್ಕಿ ಕಾಣಸಿಗುವುದು ತುಂಬ ವಿರಳ ಬಿಡಿ!.

ಎಲ್ಲಾ ಬೆಳವಗಳಂತೆ ಎರಡು-ಮೂರು ಬಿಳಿಯ ಮೊಟ್ಟೆಗಳಿಟ್ಟು, ಹದಿನಾಲ್ಕು ಅಥವಾ ಹದಿನೈದು ದಿನಗಳ ಕಾಲ ಕಾವುಕೊಟ್ಟು ಮರಿಮಾಡುತ್ತವೆ. ಬನ್ನೇರುಘಟ್ಟದಂತಹ ಕುರುಚಲು ಕಾಡುಗಳಲ್ಲಿ ಮುಖ್ಯವಾಗಿ ಮೂರು ಬಗೆಯ ಬೆಳವಗಳನ್ನು ಕಾಣಬಹುದು, ಈ ಕತೆಯಲ್ಲಿ ಮೂಡಿರುವ ಬೂದುಬೆಳವ, ಮತ್ತೆ ಇತರೆ ಚೋರೆ ಹಕ್ಕಿ, ಕಂದು ಬೆಳವನ ಹಕ್ಕಿ ಈ ಎಲ್ಲಾ ಬೆಳವಗಳ ಆವಾಸವು ಒಂದೇ ರೀತಿಯಾಗಿದ್ದು, ಒಂದೇ ಜಾತಿಯಲ್ಲಿ ಕಂಡು ಬರುತ್ತವೆ.



ಮುದುಕ ಕಾಲುಬೈರನಿಗೆ ಕೈ-ಕಾಲುಗಳ ನಡುಕ ಇದ್ದುದ್ದರಿಂದ ಕ್ಯಾಟರ ಬಿಲ್ಲಿನಿಂದ ಗುರಿ ಇಡಲು ಆಗದಿದ್ದರೂ!, ಈ ಅಧುನಿಕ ಜಗತ್ತಿನ ಎದುರಿಗೆ ಬೇರೆಯೇ ಉಪಾಯವನ್ನು ಕಂಡುಕೊಂಡಿದ್ದ, ಈ ಬೆಳವಗಳು ಬಂದು ಕೂರುತ್ತಿದ್ದ ಸ್ತರಗಳನ್ನು ನೋಡಿಕೊಂಡು, ಆ ಜಾಗಕ್ಕೆ ಹಲಸಿನ ಮರದಲ್ಲಿ ಬರುವ ಅಂಟನ್ನು ತಂದು ಹಕ್ಕಿ ಕೂರುವ ಜಾಗಕ್ಕೆ ಬಳಿದು, ದೂರದಲ್ಲಿ ಕಾಯುತ್ತಾ ಕುಳಿತ್ತಿರುತ್ತಿದ್ದ. ಮರದ ಕೊಂಬೆ, ಪೊದೆಯ ಕಡ್ಡಿ, ಕಾಂಪೌಂಡ್ನ ಕಲ್ಲುಕಂಬಗಳ ತುದಿಯಲ್ಲಿ ಹಾರಿ ಬಂದ ಬೆಳವಗಳು ವಿಶ್ರಾಂತಿಗಾಗಿ ಈ ಸ್ತರಗಳ ಮೇಲೆ ಕೂರುತ್ತಿದ್ದವು, ಬೆಳವಗಳ ಕೂರುವ ಕ್ಷಣಾರ್ಧದಲ್ಲಿ ಅಂಟು ಕಾಲಿಗೆ ಸುತ್ತಿಕೊಂಡು, ಅದು ಹಾರಲು ಪ್ರಯತ್ನಿಸಿ ರೆಕ್ಕೆಗಳಿಗೆಲ್ಲ ಸುತ್ತಿಕೊಂಡು ಒದ್ದಾಡುತ್ತಿರಬೇಕಾದರೆ, ಓಡಿಹೋಗಿ ಹಿಡಿಯುತ್ತಿದ್ದ. ಹಲಸಿನ ಮರದಲ್ಲಿ ಕಾಯಿಗಳು ಬಿಟ್ಟಾಗ ಮಾತ್ರ ಸಿಗುವ ಅಂಟು. ವರ್ಷದ ಕೆಲ ಕಾಲದಲ್ಲಿ ಈ ಅಂಟು ಸಿಗುವುದಿಲ್ಲ. ಆಗ ಈ ಹಲಸಿನ ಅಂಟಿನ ಬದಲು ಮತ್ಯಾವ ಸ್ವಾಭಾವಿಕ ಅಂಟು ಸಿಗದು. ಆಗ ಹಲ್ಲಿಲ್ಲದ ಮುದುಕ ಕಾಲುಬೈರ ಅಂಗಡಿಯಲ್ಲಿ ಸಿಗುವ ಚುಯಿಂಗ್ ಗಮ್ಗಳನ್ನು ಕೊಂಡುಕೊಂಡು, ಮಕ್ಕಳಿಗೆಲ್ಲಾ ಅಗೆಯಲು ಕೊಡುತ್ತಿದ್ದ, ಮಕ್ಕಳಿಗೆ ಖುಷಿಯೋ ಖುಷಿ!, ತಾನೂ ಅಗೆಯುತ್ತಿದ್ದ, ಮಕ್ಕಳಿಗೆ ಒಂದು ಶರತ್ತು!, ಚುಯಿಂಗ್ ಗಮ್ ಅಗಿದ ಮೇಲೆ ಕೊನೆಯಲ್ಲಿ ಸಿಗುವ ಅಂಟನ್ನು ಮತ್ತೆ ಒಪ್ಪಸ್ಸ್ ನೀಡಬೇಕು. ಅದನ್ನೇ ಅಂಟನಾಗಿ ಮಾಡಿಕೊಂಡು ಹಕ್ಕಿ ಶಿಕಾರಿ ಮಾಡುತ್ತಿದ್ದ.

ಮುದುಕ ಕಾಲುಬೈರ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ರೀತಿಯ ಶಿಕಾರಿ ಮಾಡುತ್ತಿದ್ದ, ಆದರೆ ಇಂದು ನಾವು ತಿಳಿದಿದ್ದರೂ ಹಲವಾರು ತಪ್ಪುಗಳನ್ನು ಮಾಡುತ್ತಿದ್ದೇವೆ. ಈ ಚುಯಿಂಗ್ ಗಮ್ ಅಗಿದು ಎಲ್ಲೆಂದರಲ್ಲಿ ರಸ್ತೆಯಲ್ಲಿ ಎಸೆದು ಹೋಗುತ್ತೇವೆ. ಗುಬ್ಬಚ್ಚಿ, ಮೈನಾ, ಬಾನಕ್ಕಿ ಮುಂತಾದ ಹಕ್ಕಿಗಳು ಈ ಚುಯಿಂಗ್ ಗಮ್ ಸ್ವಲ್ಪ ಸಿಹಿಯಿರುವುದರಿಂದ ಅಥವಾ ಏನೋ ತಿನ್ನುವ ಪದಾರ್ಥ ಇರಬಹುದು ಎಂದು ತಿಂದು ಸಾಯುತ್ತಿವೆ. ನಮಗೆ ಅರಿವಿಲ್ಲದಯೇ ಹಕ್ಕಿಗಳ ಜೀವಗಳನ್ನು ತೆಗೆಯುತ್ತಿದ್ದೇವೆ. ಈ ಅಧುನಿಕ ಜಗತ್ತಿನಲ್ಲಿ ಕಾಲುಬೈರನಿಗೂ ನಮಗೂ ವ್ಯತ್ಯಾಸವಿಲ್ಲದೆಯೇ ಬದುಕುತ್ತಿದ್ದೇವೆ.



- ಅಶ್ವಥ ಕೆ. ಎನ್

# ವಿದ್ಯಾರ್ಥಿಗಾಗಿ ವಿಜ್ಞಾನ

## ❖ ೪೦೦ ವರ್ಷ ಹಿಮದಲ್ಲಿದ್ದ ಹಾವಸೆ ಸಸ್ಯ ಇನ್ನೂ ಬದುಕಿದೆ!



ತಂಪಾದ ಜಾಗಗಳಲ್ಲಿ, ನೆರಳಿರುವ ಗೋಡೆಗಳ ಮೇಲೆ ಸಣ್ಣ ಸಣ್ಣ ಪಾಚಿಯಂತ ಸಸ್ಯಗಳನ್ನು ನೀವು ನೋಡಿರಬಹುದು. ಇವು ಹಾವಸೆ ಅಥವಾ ಶೈವಲಗಳು. ಜಾಗತಿಕ ತಾಪಮಾನ ಹೆಚ್ಚಾಗುತ್ತಿರುವುದರಿಂದ ಭೂಮಿಯ ಹಿಮನದಿಗಳು ಕರಗುತ್ತಿವೆ.

ಉತ್ತರ ಧೃವದಲ್ಲಿರುವ *'ಎಲ್ಸ್ ಮೇರ'* ದ್ವೀಪದಲ್ಲಿ ಇರುವ ಹಿಮನದಿಗಳ ಬಗ್ಗೆ ಅಧ್ಯಾಯನ ಮಾಡುವಾಗ *'ಕ್ಯಾತರೀನಾ ಲಾಪರ್ಗ'* ಎಂಬ ಜೀವವಿಜ್ಞಾನಿಗೆ *'ಎಲ್ಸ್ ಮೇರ'* ನ ಹಿಮನದಿಯ ತಳದಲ್ಲಿ ಸಗಣಿ ತಪ್ಪೆಯಂತಹ ಬೂದು ಬಣ್ಣದ ಗುಪ್ಪೆಗಳು ಸಿಕ್ಕವು. ಆ ಗುಪ್ಪೆಗಳನ್ನು *ಲಾಪರ್ಗೇ* ಯು ತನ್ನ ಲ್ಯಾಬ್ ಗೆ ಹೊತ್ತು ತಂದರು. ಕಾರ್ಬನ್ ಡೇಟಿಂಗ್ ಮಾಡಿ ಆ ಗುಪ್ಪೆ 400 ವರ್ಷ ಹಳೆಯದಾದ ಹಾವಸೆ ಸಸ್ಯದ್ದು ಎಂದು ತಿಳಿದು ಬಂತು. ಸುಮಾರು ನಾನೂರು ವರ್ಷಗಳ ಹಿಂದೆ ಸಂಭವಿಸಿದ್ದ ಐಸ್ ಏಜ್ ನಲ್ಲಿ ಈ ಹಿಮನದಿಯ ತಳದಲ್ಲಿ ಈ ಹಾವಸೆ ಸಸ್ಯಗಳು ಸಿಲಿಕಿರಬಹುದು ಎಂದು ನಿರ್ಣಯಿಸಿದರು.

ಆ 400 ವರ್ಷ ಹಳೆಯದಾದ ಬೂದುಬಣ್ಣದ ತೊಪ್ಪೆಗೆ ಲ್ಯಾಬಿನಲ್ಲಿ ಅದಕ್ಕೆ ಬೇಕಾದ ಆಹಾರ ನೀರು ಸೂರ್ಯನ ಬೆಳಕನ್ನು ಕೊಟ್ಟದ್ದೇ ತಡ ಕೆಲವೇ ದಿನಗಳಲ್ಲಿ ನಿರ್ಜೀವ ವಸ್ತುವಂತಿದ್ದ ಆ ತಪ್ಪೆಯಲ್ಲಿ ಸಜೀವವಾದ ಹಸಿರು ಹಾವಸೆಗಳು ಬೆಳೆದು ಸಜೀವಗೊಂಡಿವೆ. ಹೂಬಿಡುವ ಗಿಡಗಳಂತೆ ಹಾವಸೆಗಳು ಬೀಜದಿಂದ ಮೊಳಕೆಯೊಡೆಯುವುದಿಲ್ಲ. ಹಾವಸೆಯ ಒಂದೇ ಒಂದು ಜೀವಕೊಶವಿದ್ದರೂ ಸಾಕು, ಅದಕ್ಕೆ ಬೇಕಾದ ವಾತವರಣ ಸಿಕ್ಕಾಗ ಬೆಳೆಯಲಾರಂಭಿಸುತ್ತವೆ.

ಈ ವಿದ್ಯಮಾನದಿಂದ ಮುಂದೊಂದು ದಿನ ಭೂಮಿಯಲ್ಲಿ ಐಸ್ ಏಜ್ ಬಂದು ಪ್ರಳಯವಾದರೂ ಈ ಸಣ್ಣ ಹಾವಸೆ ಸಸ್ಯಗಳು ನೂರಾರು ವರ್ಷಗಳ ಕಾಲ ಜೀವವನ್ನು ಹಿಡಿದಿಟ್ಟುಕೊಂಡು ಮರುಹುಟ್ಟು ಪಡೆಯಲು ಕಾದಿರುತ್ತವೆ. ಹಿಮ ಕರಗಿದರೆ ಮತ್ತೆ ಜೀವತಳೆಯುತ್ತವೆ. ಬದುಕುತ್ತವೆ, ಬೆಳೆಯುತ್ತವೆ.

**ಹಾವಸೇ ಸಸ್ಯ**: ಹೂವಿಲ್ಲದ ಬೀಜಬಿಡದ ಬೇರಿಲ್ಲದ ಸಣ್ಣ ಸಸ್ಯಗಳು. ಅವು ತಮಗೆ ಬೇಕಾದ ನೀರು, ಗಾಳಿಗಳನ್ನು ಸಣ್ಣ ಸಣ್ಣ ಎಲೆಗಳಿಂದಲೇ ಹೀರಿಕೊಂಡು ತಮ್ಮ ಆಹಾರವನ್ನು ತಾವೇ ತಯಾರಿಸುತ್ತವೆ.

**ಹಿಮನದಿ**: ಹೆಪ್ಪುಗಟ್ಟಿದ ಹಿಮವು ನದಿಯಂತೆ ನಿಧಾನವಾಗಿ ಚಲಿಸುತ್ತದೆ. ಹಿಮಾಲಯದಲ್ಲಿ ಹಿಮನದಿಯನ್ನು ಕಾಣಬಹುದು.

**ಕಾರ್ಬನ್ ಡೇಟಿಂಗ್**: ಪಳಯುಳಿಕೆಗಳ ಕಾಲವನ್ನು ತಿಳಿಯಲು ಬಳಸುವ ಒಂದು ವಿಧಾನ ಇದರಲ್ಲಿ ಕಾರ್ಬನ್ ಐಸೋಟೋಪ್ ನ ಪ್ರಮಾಣವನ್ನು ಆಧರಿಸಿ ನಿಖರವಾದ ಕಾಲವನ್ನು ತಿಳಿಯಬಹುದು.



- ಶಂಕರಪ್ಪ ಕೆ.ಪಿ

# ಚಿಟ್ಟೆ



ಚಿಟ್ಟೆ  ಚಿಟ್ಟೆ  ಬಣ್ಣದ ಚಿಟ್ಟೆ
ನಿನ್ನನು ನೋಡಿ  ಇಷ್ಟ  ಪಟ್ಟೆ
ಹಿಡಿಯಲು ಹೋಗಿ ಗದ್ದೆಲಿ  ಬಿದ್ದೆ
ಬಿದ್ದು ನಾನಾದೆ ಮಣ್ಣಿನ ಮುದ್ದೆ .

ಕಾಣುವೆ ನೀನು ಬಣ್ಣ ಬಣ್ಣ
ರೆಕ್ಕೆ ಬಿಚ್ಚಿ ಹಾರು ಬಾನಲಿ
ಹೂವಿಗೆ ಸಂತಸ ನಿನ್ನಯ   ಸ್ಪರ್ಶ
ನೋಡಿದ ನನ್ನದೆ ಆಯಿತು ಹರ್ಷ.

ಹುಟ್ಟಿದೆ  ನೀನು  ಹುಳುವಾಗಿ
ಜೊಲ್ಲನು  ಸುರಿಸಿ ಗೂಡು ಕಟ್ಟಿದೆ
ಕತ್ತಲೆ ಗೂಡಲೆ  ರೆಕ್ಕೆಯ ತಂದೆ
ಬಣ್ಣಬಣ್ಣದ ರೆಕ್ಕೆಯ ಪಡೆದೆ

ಕಾಡಿನ ಈ ಸಾಗರದಲ್ಲಿ
ಪಕ್ಷಿಗಳೆಂದರೆ  ಭಯವಲ್ಲವೆ ನಿನಗೆ
ಅವು ತಿನ್ನಲು ಬಂದರೆ ಏನು ಮಡುವೆ
ತಪ್ಪಿಸಿ ಕೊಳ್ಳಲು  ಉಪಾಯವಿದೆಯೇ.?

ಸಂತತಿ ಬೆಳಸಲು ಮೊಟ್ಟೆಯನಿಟ್ಟೆ
ಮರಿಯಾಯಿತು ಒಡೆದು ಮೊಟ್ಟೆ
ಚಿಟ್ಟೆ  ಚಿಟ್ಟೆ  ಬಣ್ಣ ದ ಚಿಟ್ಟೆ.



- ಧನರಾಜ್.ಎಂ